8. ನಿಯಮ 69ರ ಮೇಲೆ ನಡೆದ ಅಲ್ಪ ಕಾಲಾವಧಿ ಚರ್ಚೆ

ವಿಷಯ: ಪಶ್ಚಿಮ ಘಟ್ಟಗಳ ಸಂರಕ್ಷಣೆ ಕುರಿತು ಡಾ: ಕಸ್ತೂರಿ ರಂಗನ್ ನೀಡಿರುವ ವರದಿ ಬಗ್ಗೆ.

ಅಧ್ಯಕ್ಷರು:– ಹೇಳಿ, ಐದು ನಿಮಿಷಗಳಲ್ಲಿ ಮುಗಿಸಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಶಿರಸಿ):– ಮಾನ್ಯ ಅಧ್ಯಕ್ಷರೆ, ನಾನು ಐದು ನಿಮಿಷಗಳಲ್ಲಿ ಮುಗಿಸುತ್ತೇನೆ. ನಿಲುವಳಿ ಸೂಚನೆಯ ಪ್ರಕಾರ ನಾವು ಕೊಟ್ಟಿರುವಂಥ ವಿಷಯವನ್ನು, ತಾವು ಅದನ್ನು 69ರ ಅಡಿಯಲ್ಲಿ ಅದನ್ನು ಪರಿವರ್ತಿಸಿ ಈ ವಿಷಯವನ್ನು ಚರ್ಚೆಗೆ ಅವಕಾಶ ಕೊಟ್ಟಿದ್ದೀರಿ. ಅದಕ್ಕೆ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಬೆಳಗಾಂ ಅಧಿವೇಶನದಲ್ಲಿ, ಬೇರೆ ಬೇರೆ ಅಧಿವೇಶನಗಳಲ್ಲಿ ಈ ವಿಷಯವಾಗಿ ಸಾಕಷ್ಟು ವಿಸ್ತೃತವಾಗಿ ಚರ್ಚೆಯಾಗಿದೆ. ಹಾಗಾಗಿ ನಾನು ಮತ್ತೆ ಮತ್ತೆ ಬೇರೆ ವಿಷಯಗಳಿಗೆ ಹೋಗುವುದಕ್ಕೆ ಬಯಸುವುದಿಲ್ಲ. ಈಗ ಮಾನ್ಯ ಕಾನೂನು ಸಚಿವರು ಮತ್ತು ಉಳಿದೆಲ್ಲಾ ಸಚಿವರು ದಯವಿಟ್ಟು ಗಮನಿಸಬೇಕು. ನಮಗೆ ಕೇಂದ್ರ ಸರ್ಕಾರ ಕಳುಹಿಸಿರುವಂಥ ಒಂದು ಆದೇಶದಲ್ಲಿ ಸ್ಪಷ್ಟವಾಗಿ ಹೇಳಿದೆ. ಕೇರಳ ಮಾದರಿಯಂತೆ ತಳಮಟ್ಟದಲ್ಲಿ ground surveyಯನ್ನು ಮಾಡಿ, ವರದಿಯನ್ನು ಕಳುಹಿಸಿದರೆ ಮಾತ್ರ, ನಾವು ಅದನ್ನು ಅಧಿಕೃತ ಸಿಂಧು ಎಂದು ಪರಿಗಣಿಸುತ್ತೇವೆನ್ನುವಂಥ ಆದೇಶವನ್ನು ಕೇಂದ್ರ ಸರ್ಕಾರ ನಮಗೆ ಕಳುಹಿಸಿದೆ, ಹೇಳಿದೆ. ಆ ಹಿನ್ನಲೆಯಲ್ಲಿ ಈಗ ಬಹಳ ಮುಖ್ಯವಾಗಿ ಆಗಬೇಕಾಗಿರುವಂಥದ್ದು, cabinet sub committeeಯವರು ಎಲ್ಲಾ ಕಡೆಗಳಿಗೆ ಹೋಗಿ ಬರುತ್ತಿದ್ದೀರಿ. ಅಲ್ಲಿ ಜನರ ಅಭಿಪ್ರಾಯಗಳನ್ನು ಕೇಳಿಕೊಂಡು ಬರುತ್ತಿದ್ದೀರಿ, ಅದು ಒಂದು ಭಾಗ. ತಾವು ಬೆಳೆಗಾವಿಯಲ್ಲಿ ಹೇಳಿದ್ದೀರಿ, ಅದರ ಪ್ರಕಾರ ನೀವು ಬರುತ್ತಿದ್ದೀರಿ, ಅದು ಒಂದು ಭಾಗವಾಗಿದೆ. ಅದು ಒಂದು ಚರ್ಚೆಗೆ, ಜನ ಜಾಗೃತಿಯ ಅದರದೇ ಆದಂಥ ಪರಿಣಾಮವನ್ನು ಬೀರುತ್ತಿದೆ, ಅದು ಆಗಬಹುದು. ಆದರೆ Green Bench, Supreme Court,

ಅದಕ್ಕಿಂತ ಹೆಚ್ಚಿಗೆ ಇದನ್ನು ಕೇಂದ್ರ ಸರ್ಕಾರ ಒಪ್ಪಬೇಕೆಂದು ಆದರೆ, ನೀವು ತಳಮಟ್ಟದ ಸರ್ವೆಯನ್ನು ಮಾಡಲೇ ಬೇಕು. ಆ ರೀತಿ ಮಾಡಿ ಕಳುಹಿಸಿದರೆ ಮಾತ್ರ, ಅದು ಸಿಂಧು ಆಗುತ್ತದೆಂದು, ಮೊನ್ನೆ ಬೆಂಗಳೂರಿಗೆ ಕೇಂದ್ರದ ಪರಿಸರ ಸಚಿವರಾದ ಮಾನ್ಯ ಪ್ರಕಾಶ್ ಜಾವಡೇಕರ್‌ರವರು ಬಂದಿದ್ದರು. ನಾವೆಲ್ಲಾ ಅವರ ಜೊತೆಗೆ ಮಾತನಾಡಿದಾಗ ಅದನ್ನು ಅವರು ಸ್ಪಷ್ಟಪಡಿಸಿದ್ದಾರೆ. ರಾಜ್ಯ ಸರ್ಕಾರ ground survey ಮಾಡಿಯೇ ವರದಿಯನ್ನು ಕಳುಹಿಸಬೇಕು, ಆ ರೀತಿ ಇಲ್ಲವೆಂದರೆ ಆ ವರದಿಯನ್ನು ಒಪ್ಪುವುದಿಲ್ಲ. ಹಾಗಾಗಿ ನಾನು ತಮ್ಮಲ್ಲಿ ತಕ್ಷಣ ಆಗ್ರಹಿಸುವುದೇನೆಂದರೆ, ನಿಮ್ಮ cabinet sub-committee ಇನ್ನು ಎರಡು ಜಿಲ್ಲೆಗಳಿಗೆ ಹೋಗಿ ಬರುವುದಿದೆ. ಆಮೇಲೆ ಕುಳಿತುಕೊಂಡು decision ತೆಗೆದುಕೊಳ್ಳುತ್ತೇವೆಂದು ಹೇಳುವುದಕ್ಕಿಂತಲೂ, ತಾವು ನಾಳೆ, ನಾಡಿದ್ದು ಜಿಲ್ಲಾಧಿಕಾರಿಗಳಿಗೆ ಒಂದು ಆದೇಶವನ್ನು ಕಳುಹಿಸಿ. ಅಲ್ಲಿ ಅವರು ಗ್ರಾಮ ಲೆಕ್ಕಾಧಿಕಾರಿಗಳ ಮತ್ತು ಉಪ ವಲಯ ಅರಣ್ಯಾಧಿಕಾರಿಗಳ, ಅರಣ್ಯ ರಕ್ಷಕರ, Field Committeeಯನ್ನು ಮಾಡುವುದಕ್ಕೆ ಯಾರ್ಯಾರೆಂದು ಇದೆ. ಆ Field Committeeಯವರು ಯಾವ ಗ್ರಾಮ, ಪರಿಸರ ಸೂಕ್ಷ್ಮ ಗ್ರಾಮವೆಂದು announce ಆಗಿದೆಯೋ, ಆ ಗ್ರಾಮಕ್ಕೆ ಅವರು ಹೋಗಿ, ಒಂದು ಕಾಲಮಿತಿಯಲ್ಲಿ ಜನರ ಅಭಿಪ್ರಾಯವನ್ನು ತೆಗೆದುಕೊಂಡು, ಆಗಬೇಕಾದಂಥ ತಿದ್ದುಪಡಿ ಏನೆಂಬುದನ್ನು ಅದರಲ್ಲಿ ದಾಖಲಿಸಿ ಅದನ್ನು ಸರ್ಕಾರಕ್ಕೆ ಕಳುಹಿಸುವಂಥ ವ್ಯವಸ್ಥೆಯನ್ನು ಮಾಡಿದರೆ, ಸರ್ಕಾರ ಅದನ್ನು ಕೇಂದ್ರಸರ್ಕಾರಕ್ಕೆ ಕಳುಹಿಸಬಹುದು. ಅದಕ್ಕೆ ಕೇಂದ್ರಸರ್ಕಾರ ಏಪ್ರಿಲ್ 15ನೇ ತಾರೀಖಿನವರೆಗೂ ನಮಗೆ ಅವಕಾಶವನ್ನು ಕೊಟ್ಟಿದೆ. ಹಾಗಾಗಿ ನಮಗೆ breathing time ಸಿಕ್ಕಿದೆ, ನಮಗೆ ಸಮಯ ಮುಗಿದೇ ಹೋಗಿದೆಯೆಂಬ ಆತಂಕದಲ್ಲಿ ನಾವು ಇದ್ದೆವು. ಈಗ ಏಪ್ರಿಲ್ 15ನೇ ತಾರೀಖಿನವರೆಗೆ ಅವಕಾಶವನ್ನು ಕೊಟ್ಟಿರುವುದರಿಂದ Field Committee ವತಿಯಿಂದ ground survey ಮಾಡಿಸಿ, ಅವರ ಅಭಿಪ್ರಾಯಗಳನ್ನು ದಾಖಲಿಸಿ, ಎಲ್ಲೆಲ್ಲಿ relaxation ಬೇಕು, ಆ relaxation ಅನ್ನು ಅದಕ್ಕೆ ಅಳವಡಿಸಿಕೊಂಡು

ಅದನ್ನು ಕಳುಹಿಸುವಂತೆ ಆಗಬೇಕು. ನಾವು ಕಲ್ಲು, ಮರಳು, ಜಲ್ಲಿ ತೆಗೆಯಬಾರದೆನ್ನುವುದಕ್ಕೆ relaxation ಕೇಳಬೇಕಾಗುತ್ತದೆ. ಅದರಂತೆ buffer zone 10 ಕಿ.ಮೀ. ಇದೆ, ಅದರಲ್ಲಿ relaxation ಕೇಳಬೇಕಾಗುತ್ತದೆ. ನಾವು buffer zone ಎಲ್ಲಾ ಇಟ್ಟುಕೊಂಡು, ನಾವು ಈ ರೀತಿ ಪ್ರಯತ್ನ ಮಾಡುವುದಕ್ಕೆ ಹೋದರೆ ಆಗುವುದಿಲ್ಲ. ಯಾವ ಹಳ್ಳಿಯಲ್ಲೂ ಬೇರೆ ಅಭಿವೃದ್ಧಿ ಕೆಲಸಗಳನ್ನು ಮಾಡುವುದಕ್ಕೆ ಆಗುವುದಿಲ್ಲವೆನ್ನುವಂಥದ್ದು ನಮಗೆಲ್ಲರಿಗೂ ಮನವರಿಕೆಯಾಗಿದೆ. ಹಾಗಾಗಿ buffer zoneನಲ್ಲೂ 10 ಕಿ.ಮೀ. ವ್ಯಾಪ್ತಿಯಲ್ಲಿ ಏನಾದರೂ ಮಾಡುವುದಾದರೆ permission ತೆಗೆದುಕೊಳ್ಳಬೇಕೆಂದು ಇದೆ, permission ತೆಗೆದುಕೊಳ್ಳುವುದು ಎಷ್ಟು ಕಷ್ಟ ಎನ್ನುವುದು ನಮಗೆಲ್ಲಾ ಅನುಭವದಲ್ಲಿದೆ. Forest Conservation Act, 1980 ಪ್ರಕಾರ ಒಂದು ರಸ್ತೆಯನ್ನು ಮಾಡುವುದಕ್ಕೆ ಎಷ್ಟು ತೊಂದರೆ ಇದೆ, ಒಂದು ಆಸ್ಪತ್ರೆ, ಶಾಲೆ ಕಟ್ಟುವುದಕ್ಕೆ ಎಷ್ಟು ತೊಂದರೆ ಇದೆ ಎನ್ನುವುದನ್ನು ನಾವು ಅನುಭವಿಸುತ್ತಿದ್ದೇವೆ. ನಮಗೆ Junior College ಒಂದಕ್ಕೆ ಅರಣ್ಯ ಇಲಾಖೆ permission ಕೊಟ್ಟಿಲ್ಲವೆಂದು ಹೇಳಿದೆವು, ಅದಕ್ಕೆ ಇನ್ನೂ ಕೊಟ್ಟಿಲ್ಲ. ನಮ್ಮ ಜೂನಿಯರ್ ಕಾಲೇಜು ಇನ್ನೂ ಆಗಿಲ್ಲ, ಮಾನ್ಯ ಮುಖ್ಯಮಂತ್ರಿಯವರು ಅದನ್ನು clear ಮಾಡುವುದಕ್ಕೆ ಆದೇಶ ಕೊಡುತ್ತೇನೆಂದು ಹೇಳಿದರು, ಅದು ಆಗಲಿಲ್ಲ. ಈ ವ್ಯವಸ್ಥೆಯಲ್ಲಿರುವ ಕಠಿಣತೆಯನ್ನು ನಾವೆಲ್ಲರೂ ಅನುಭವಿಸುತ್ತಿದ್ದೇವೆ. ಅದಕ್ಕೆ ಏನೂ ಮಾಡುವುದಕ್ಕೆ ಆಗುವುದಿಲ್ಲ. ನಾವು ಇವೆಲ್ಲವನ್ನೂ ನೋಡಿ ಅನುಭವಿಸುತ್ತಿರುವಂಥ ಸ್ಥಿತಿ ಹಾಗೇ ಮುಂದುವರೆದಿದೆ. ಆದರೆ ನನ್ನ ವಿಷಯವೇನೆಂದರೆ, ಈಗ ಈ ರೀತಿಯ ಕಷ್ಟ ಬೇರೆ ಬೇರೆ ಕಾಯಿದೆಗಳಿಂದ ಅನುಭವಿಸುತ್ತಿರುವಾಗ, ಮತ್ತೆ ಇದೊಂದು ಡಾ: ಕಸ್ತೂರಿ ರಂಗನ್ ವರದಿ ಬಂದು, ಈ ವರದಿಯನ್ನು ಕೇಂದ್ರಸರ್ಕಾರ ಒಪ್ಪಿಕೊಂಡು ನಮಗೆ ಕಳುಹಿಸಿದರೆ, ನಮ್ಮ ಮಲೆನಾಡಿನ ಪಶ್ಚಿಮಘಟ್ಟ ಪ್ರದೇಶದ ಹಳ್ಳಿಗಳಲ್ಲಿ ಜನರು ಜೀವನ ನಡೆಸುವುದೇ ದುಸ್ಥರವಾಗುತ್ತದೆ. ಅಲ್ಲಿ ಒಕ್ಕಲೆಬ್ಬಿಸುವುದಿಲ್ಲವೆಂದು ಹೇಳುತ್ತಾರೆ, ಆದರೆ ಅಲ್ಲಿಂದ ಎದ್ದು ಓಡಬೇಕು, ಆ ರೀತಿಯ ಪರಿಸ್ಥಿತಿಗಳು

ಸಹಜವಾಗಿ ನಿರ್ಮಾಣವಾಗುವಂಥ ಸಂದರ್ಭಗಳಿವೆ. ಹಾಗಾಗಿ buffer zone ವಿಷಯದಲ್ಲಿ ಮತ್ತು Field Committee ಏನಿದೆ, ಅದು verify ಮಾಡಿ, ಅದನ್ನು objection ಕೇಳಿ ಕಳುಹಿಸುವ ವಿಷಯದಲ್ಲಿ ಸರ್ಕಾರ ಅದಕ್ಕೆ ಬೇಕಾದಂಥ ಪ್ರಯತ್ನವನ್ನು ಮಾಡಲೇ ಬೇಕು. ಈಗ ಆಗಿರುವ survey ಸರಿಯಾಗಿಲ್ಲವೆಂಬುದು ನಮಗೆ ಗೊತ್ತಿದೆ. ಈಗ ಆಗಿರುವ survey satellite ಆಧಾರವಾಗಿ ಆಗಿಲ್ಲವೆಂಬುದು ನಮಗೆಲ್ಲಾ ಮನವರಿಕೆಯಾಗಿರುವುದು, ಏಕೆಂದರೆ, ಅದರಲ್ಲಿ ಕಾಫಿ, ಅಡಿಕೆ ಅಥವಾ ರಬ್ಬರ್ plantation crop ಗಳೆಲ್ಲವೂ ಅದು ಅರಣ್ಯೀಕರಣವೆಂದು ಕಂಡಿದೆ. ಆ ಹಿನ್ನಲೆಯಲ್ಲಿ natural landscape or cultural landscape ನ ವಿಷಯ ಏನಿದೆ.

ಅಧ್ಯಕ್ಷರು:– ಒಂದು ನಿಮಿಷ, ಇದರಲ್ಲಿ ಎಲ್ಲರ ಅಭಿಪ್ರಾಯವೂ ಒಂದೇ ಇದೆ. ಇದರಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ, ಎಲ್ಲಾ ಕಡೆಗಳಿಗೆ ಹೋಗಿ ಬಂದಿದ್ದೀರಿ. ನಾಳೆ ಸಾಧ್ಯವಾದರೆ ನಿಮ್ಮಲ್ಲಿ effect areaಗೆ ಹೋಗಿ.

ಶ್ರೀ ಬಿ. ರಮಾನಾಥ ರೈ:– ಮಾನ್ಯ ಅಧ್ಯಕ್ಷರೆ, ಎರಡ್ಮೂರು ದಿವಸಗಳಲ್ಲಿ Cabinet sub Committee ಸೇರಿ, ಈಗ ಅವರು ಏನು ಸಲಹೆಗಳನ್ನು ಮಾಡಿದ್ದಾರೆ, ನಮ್ಮ ಉದ್ದೇಶವೇನೆಂದರೆ, ನಮಗೂ ಕೂಡ ಸಾಧ್ಯವಾದಷ್ಟು ಜನರಿಗೆ ತೊಂದರೆಯಾಗದ ರೀತಿಯಲ್ಲಿ ಮಾಡಬೇಕೆಂದು ತಾವು ನೀಡಿದ ಸಲಹೆಯಂತೆ ಜಿಲ್ಲೆಗಳಿಗೆ ಹೋಗಿದ್ದೇವೆ, ಇನ್ನು ಕೆಲವು ಜಿಲ್ಲೆಗಳು ಬಾಕಿ ಇವೆ. ಇನ್ನು field survey ಮಾಡಬೇಕಾದರೆ ಅದಕ್ಕೂ ಕೂಡ ನಾವು Cabinet sub Committee ಮಾಡಿ ಮಾಡುತ್ತೇವೆ. ಇನ್ನು ಕೇರಳ ಮಾದರಿ ಕೇರಳ ಮಾದರಿ ಎಂದು ಹೇಳಬೇಡಿ. ಅದಕ್ಕಿಂತ ಹೆಚ್ಚಿನ ಪ್ರಾಧಾನ್ಯತೆ ಕೊಟ್ಟು ನಾವು ಮಾಡುತ್ತೇವೆ. ಅಲ್ಲಿ sand mine ಮಾಡಲಿಕ್ಕೆ ನಿರ್ಬಂಧ ಇದೆ. ಅಲ್ಲಿ crusher ಮಾಡಲಿಕ್ಕೆ ನಿರ್ಬಂಧವಿದೆ. ನಾವು ಅದನ್ನು ನಿಯಂತ್ರಣವಾಗಿ ತರಬೇಕೆಂದು ಹೇಳತಕ್ಕಂಥದ್ದು ಮಾಡುತ್ತಿದ್ದೇವೆ. 1500 ಗ್ರಾಮಗಳಲ್ಲಿ ನಮ್ಮ ಲೆಕ್ಕಾಚಾರದ ಪ್ರಕಾರ 800ಕ್ಕೆ ಮಾಡಿದ್ದೇವೆ. ಅದಕ್ಕೂ ಕಡಿಮೆ ಮಾಡಲಿಕ್ಕೆ ಏನು ಸಾಧ್ಯತೆ

ಇದೆ ಅದನ್ನೂ ಕೂಡ ನಾವು ಮಾಡುತ್ತೇವೆ. ಎಲ್ಲಿಯೂ ಜನಸಾಮಾನ್ಯರಿಗೆ ತೊಂದರೆ ಆಗದ ರೀತಿಯಲ್ಲಿ ಮಾಡುತ್ತೇವೆ. ವರದಿ ಬಂದಮೇಲೆ ಅದರ ನಿಜಾಂಶ ನಿಮಗೆ ಗೊತ್ತಾಗುತ್ತದೆ. ಆದ್ದರಿಂದ ಇದಕ್ಕೆ ಮಾನ್ಯ ಸಭಾಧ್ಯಕ್ಷರು ಹೇಳಿದ ಹಾಗೆ ಸುಮ್ಮನೆ ಹೇಳಿದ್ದನ್ನೇ ಹೇಳಿಕೊಂಡು ಇರುವುದು ಬೇಡ.

(ಗೊಂದಲ)

ಅಧ್ಯಕ್ಷರು:– ಒಂದ್ನಿಮಿಷ ಹೇಳುವುದನ್ನು ಕೇಳಿ. ನಾಳೆ ಹೇಗಿದ್ದರೂ ಇಲ್ಲಿಯೇ ಇರುತ್ತೇವೆ. ಅರಣ್ಯಮಂತ್ರಿಗಳು ಮತ್ತು ಕಾನೂನು ಮಂತ್ರಿಗಳು ಇಬ್ಬರೂ ಸೇರಿ ನಮ್ಮ 4–5 ಜಿಲ್ಲೆಗೆ ಸಂಬಂಧಿಸಿದಂತೆ ಕರೆದು ಈಗ ಏನೇನು ಸಲಹೆ ಕೊಡುತ್ತಾರೆ ಅವುಗಳನ್ನು ಗಮನದಲ್ಲಿಟ್ಟುಕೊಳ್ಳಿ, ಮಂತ್ರಿಮಂಡಲದಲ್ಲಿ ಸಭೆ ಮಾಡಿಬಿಟ್ಟರೆ ನಾಳೆಯೇ ಮಧ್ಯಾಹ್ನದ ಮೇಲೆ ಒಂದು ಮೀಟಿಂಗ್ ಕರೆದುಬಿಡಿ. ಏಕೆಂದರೆ ಈಗ time ಇಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– 20% coverage area ಜಾಸ್ತಿ, 50% coverage area ವನ್ನೂ ಮಾಡಬೇಕು.

(ಗೊಂದಲ)

ಅಧ್ಯಕ್ಷರು:– ಮಂತ್ರಿಗಳು ಒಪ್ಪಿಕೊಂಡಿದ್ದಾರೆ.

ಶ್ರೀ ಬಿ. ರಮಾನಾಥ ರೈ:– ಸನ್ಮಾನ್ಯ ಅಧ್ಯಕ್ಷರೆ, ನಾವೇನೂ Supereme Court ಗೆ ಕೊಡಬೇಕೆಂದು ಅಂಥದ್ದೇನೂ ಇಲ್ಲ. ಆದರೂ ಕೂಡ ನಾವು ನಿಗದಿತ ಸಮಯಕ್ಕೆ ಸರಿಯಾಗಿ ಜನರ ಹಿತವನ್ನು ಗಮನದಲ್ಲಿಟ್ಟುಕೊಂಡು ಜನಸಾಮಾನ್ಯರಿಗೆ ತೊಂದರೆ ಆಗದ ರೀತಿಯಲ್ಲಿ ನಾವು ಮಾಡುತ್ತೇವೆ.

ಅಧ್ಯಕ್ಷರು:– ನಾಳೆ ಒಂದು ಮೀಟಿಂಗ್ ಮಾಡಿಬಿಡಿ.

ಶ್ರೀ ಕೆ.ಜಿ. ಬೋಪಯ್ಯ:– ಕೇಂದ್ರ ಸರ್ಕಾರ Green Tribunal Central ...

ಅಧ್ಯಕ್ಷರು:– ಬೋಪಯ್ಯನವರೆ, ಇಲ್ಲಿ ಕೇಳಿ, ಅವರು principle ಒಪ್ಪಿಕೊಂಡಿದ್ದಾರೆ. ತೆರೆದ ಮನಸ್ಸಿನಲ್ಲಿದ್ದಾರೆ.

ಶ್ರೀ ಕೆ.ಜಿ. ಬೋಪಯ್ಯ:– Field survey ಮಾಡಬೇಕೆಂದು Court direction ಇದೆ. ಇಲ್ಲದಿದ್ದರೆ Central Government ಒಪ್ಪುವುದಕ್ಕಾಗುವುದಿಲ್ಲ.

ಅಧ್ಯಕ್ಷರು:– ಎದುರಿಗೆ ಕುಳಿತುಕೊಂಡು ಮಾತನಾಡಿ ಬಗೆಹರಿಸಿಕೊಳ್ಳಿ. ಈಗ ನೀವು ಚರ್ಚೆ ಮಾಡಿ, ಉತ್ತರ ಕೊಟ್ಟು ಮತ್ತೆ ಒಂದಕ್ಕೊಂದು ಆಗಿ ದಿವಾಳಿ ಹತ್ತುವ ಕೆಲಸ ಮಾಡಬೇಡಿ. ಅವರು open mind ನಲ್ಲಿದ್ದಾರೆ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:– Affidavitಗೆ against ಆಗಿ ಮಾಡುವುದಕ್ಕಾಗುವುದೇ?

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ಮಾನ್ಯ ಅಧ್ಯಕ್ಷರೆ, ತಮ್ಮ ಸಲಹೆ ಮೇರೆಗೆ ಜನರ ಹಿತವನ್ನು ಗಮನದಲ್ಲಿಟ್ಟುಕೊಂಡು ಏನೂ ಸಮಸ್ಯೆ ಆಗದ ರೀತಿಯಲ್ಲಿ ನಾವು ವರದಿಯನ್ನು ಕೇಂದ್ರ ಸರ್ಕಾರಕ್ಕೆ ಕೊಡುತ್ತೇವೆ.

ಶ್ರೀ ಡಿ.ಎನ್. ಜೀವರಾಜ್:– ಮೊನ್ನೆ ಕೇಂದ್ರ ಸಚಿವರು ಬಂದಿದ್ದಾಗ ಭೇಟಿಯಾಗಿದ್ದೆವು. ಕೇಂದ್ರ ಸಚಿವರು ಸ್ಪಷ್ಟವಾಗಿ ಏನು ಹೇಳಿದ್ದಾರೆಂದರೆ, ಅದನ್ನು ನಾವು ಮಾನ್ಯ ಮಂತ್ರಿಯವರ ಗಮನಕ್ಕಾದರೂ ತರಬೇಕಲ್ಲವೇ?

ಅಧ್ಯಕ್ಷರು:– ರಾತ್ರಿ ಎಷ್ಟು ಹೊತ್ತಿನ ತನಕ ಕುಳಿತುಕೊಳ್ಳುತ್ತೀರಿ?

ಶ್ರೀ ಡಿ.ಎನ್. ಜೀವರಾಜ್:– ಎರಡೇ ಎರಡು ನಿಮಿಷದಲ್ಲಿ ಹೇಳಬೇಕಾದ್ದನ್ನು ಹೇಳಿ ಮುಗಿಸಿಬಿಡುತ್ತೇನೆ ಅಧ್ಯಕ್ಷರೆ. ಬೋಪಯ್ಯನವರು 2 ನಿಮಿಷ ಮಾತನಾಡಿದರು, ನಾನು ಎರಡು ನಿಮಿಷ ಮಾತನಾಡಿ ಕುಳಿತುಬಿಡುತ್ತೇನೆ.

ಶ್ರೀ ಬಿ. ರಮಾನಾಥ ರೈ:– ಕಾಗೇರಿಯವರು ಗಮನಕ್ಕೆ ತಂದರು. ಅದನ್ನೇ ಮತ್ತೆ ಮತ್ತೆ ಹೇಳಿ ಈ ಸದನದ ಗಮನಕ್ಕೆ ತಂದರು. ಬೋಪಯ್ಯನವರು ಗಮನಕ್ಕೆ ತಂದರು, ನಮ್ಮ ಗಮನಕ್ಕೂ ತಂದರೂ, ಎಲ್ಲರ ಗಮನಕ್ಕೂ ತಂದರು. ಅಲ್ಲವೇ?

ಅಧ್ಯಕ್ಷರು:– ಆಯಿತು ಬಿಡಿ. ಇನ್ನು 5 ನಿಮಿಷದಲ್ಲಿ ಪೂರೈಸಿಬಿಡೋಣ. ಏನು ಹೇಳುತ್ತೀರೋ ಹೇಳಿ. ವ್ಯವಹಾರಿಕವಾಗಿ ನಾನು ಹೇಳಿದೆ. ಇಲ್ಲ, ನಾವು ಭಾಷಣ ಮಾಡಬೇಕೆಂದರೆ ಮಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ನಾನು ಹೇಳಬೇಕಾದ್ದನ್ನು ಒಂದೇ ವಾಕ್ಯದಲ್ಲಿ ಹೇಳಿ ಮುಗಿಸುತ್ತೇನೆ. ಯಾರಿಗೂ ಜನರಿಗೆ ತೊಂದರೆ ಕೊಡಬೇಕೆಂದು ನಿಮಗಿದೆ ಎಂದು ನಾವು ಅಂದುಕೊಂಡಿಲ್ಲ. ನಾವೂ ಅದನ್ನು ಹೇಳಿಬಿಡುತ್ತೇವೆ. ಒಂದು ಆಡಳಿತ ಪಕ್ಷವಾಗಿ ನೀವು ಜನರ ಮಧ್ಯೆ ಇದ್ದವರು, ತೊಂದರೆ ಕೊಡಬೇಕೆಂದು ನಿಮಗಿದೆ ಎಂದು ನಾವು ಭಾವಿಸಿಕೊಂಡಿಲ್ಲ. ಆದರೆ, ಕಾನೂನು, ಕೇಂದ್ರ ಸರ್ಕಾರದ ಸುತ್ತೋಲೆಗಳನ್ನು ಸರಿಯಾಗಿ ಅರ್ಥೈಸಿಕೊಂಡು ಅದರಂತೆ ನೀವು ವರದಿಯನ್ನು, ಮಾಹಿತಿಯನ್ನು ಕಳುಹಿಸದೇ ಹೋದರೆ ಜನರಿಗೆ ತೊಂದರೆಯಾಗುತ್ತದೆ. ನೀವು ಅದನ್ನು ಅರ್ಥೈಸಿಕೊಂಡು ಸರಿಯಾಗಿ ಕಳುಹಿಸಿಕೊಡುವುದಕ್ಕೆ ನಾವು ನಿಮಗೆ ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡುತ್ತಿದ್ದೇವೆ. ಒಂದು ನಿಮಿಷ ದಯವಿಟ್ಟು ಕೇಳಿ.

ಶ್ರೀ ಬಿ. ರಮಾನಾಥ ರೈ:– ಯಾವುದೇ ರೀತಿಯಲ್ಲಿ ತೊಂದರೆ ಆಗದ ರೀತಿಯಲ್ಲಿ ಕೇರಳ ಮಾದರಿಗಿಂತಲೂ ಹೆಚ್ಚು ಪರಿಣಾಮಕಾರಿಯಾಗಿ, ಜನಹಿತವನ್ನು ಗಮನದಲ್ಲಿಟ್ಟುಕೊಂಡು ಮಾಡುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ನೀವು ground survey ಮಾಡಿಸದ ಹೊರತು ಆಗುವುದೇ ಇಲ್ಲ.

ಶ್ರೀ ಬಿ. ರಮಾನಾಥ ರೈ:– ಆಯಿತು, ground survey ಮಾಡಿಸುವ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– Ground survey ಮಾಡಿಸಿರಿ ಎಂದು ನಾವು ಹೇಳುತ್ತಿರುವುದಷ್ಟೆ. ಆದ್ದರಿಂದ, Ground survey ಮಾಡಬೇಕು.

ಅಧ್ಯಕ್ಷರು:– ಆಯಿತು, repeat ಮಾಡಬೇಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ನಮಗೆ ದಾರಿತಪ್ಪಿಸಿಬಿಡುತ್ತಾರೆ, ಏನು ಮಾಡುವುದು?

ಅಧ್ಯಕ್ಷರು:– ದಾರಿ ನೀವು ತಪ್ಪಿಸುತ್ತಿದ್ದೀರಿ. ಅರಣ್ಯ ಸಚಿವರು ಸರಿ ಇದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಈ ಹಿನ್ನೆಲೆಯಲ್ಲಿ ಅವರು ಈಗ ground survey ಮಾಡಿಸಬೇಕು.

ಅಧ್ಯಕ್ಷರು:– They have agreed I say.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– 20% forest coverage ಇದೆಯಲ್ಲ, ಅದನ್ನು 50% ಗೆ forest coverage ಮಾಡಬೇಕು. ಅದರ ಜೊತೆ buffer zone ಗೆ relaxation ಕೊಡಬೇಕು.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಸಚಿವರು):– ಒಪ್ಪಿ ಆಯಿತಲ್ಲ, Field Committee ಗಳನ್ನು ಮಾಡಬೇಕೆಂದು ಹೇಳಿರತಕ್ಕಂಥದ್ದನ್ನು ನಾವು ಒಪ್ಪಿ ಆಯಿತಲ್ಲ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ನೀವು ಏನು ಹೇಳುತ್ತೀರಿ ಅದನ್ನೆಲ್ಲ ಒಪ್ಪುವ, ಆಯಿತಲ್ಲಾ.

ಅಧ್ಯಕ್ಷರು:– ಆಯಿತು, ಸಾಕು ಬಿಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– Buffer zone ನದು, 20% coverage area ದ್ದು 50% ಗೆ ಮಾಡುವಂಥದ್ದು ಇದೆ.

ಅಧ್ಯಕ್ಷರು:– ಜಯಚಂದ್ರರವರೆ, ನಾಳೆ ಒಂದು ಮೀಟಿಂಗ್ ಕರೆದು ಅಲ್ಲಿ sort out ಮಾಡಿರಿ. ಹೇಳಿ, ಹೇಳಿ, ಆಯಿತು ಭಾಷಣ ಮಾಡಿದರು ಎಂದು ನಾಳೆ ಪತ್ರಿಕೆಯಲ್ಲಿ ಹಾಕಿಸಿ (ವ್ಯಂಗ್ಯವಾಗಿ)

ಶ್ರೀ ಬಿ. ರಮಾನಾಥ ರೈ:– ಮಾನ್ಯ ಸಭಾಧ್ಯಕ್ಷರು ಹೇಳಿದ ಹಾಗೆ ಆ ಭಾಗದ ಕೆಲವು ಶಾಸಕರನ್ನು ಕರೆದು ಮಾತನಾಡುತ್ತೇವೆ, ಆಗ ಕಾಗೇರಿಯವರನ್ನೂ ಕರೆಯುವ. ನಿಮಗೆ ವಿಶ್ವಾಸ ಬರುವ ರೀತಿ ಮಾಡಿ ಕಳುಹಿಸುವ.

ಶ್ರೀ ಕೆ.ಜಿ. ಬೋಪಯ್ಯ (ಮಡಿಕೇರಿ):– ಮಾನ್ಯ ಅಧ್ಯಕ್ಷರೆ, ಈ Central Green Tribunal ನಲ್ಲಿ September 25 ರಂದು ಒಂದು order pass ಮಾಡಿದ್ದಾರೆ. ಆ orderನಲ್ಲಿ 19.9.2014ಕ್ಕೆ ಇವರು Central Governmentಗೆ MoEF Secretary ಒಂದು affidavit ಹಾಕಿದ್ದಾರೆ. ಆ Affidavit ಏನು ಹಾಕಿದ್ದಾರೆ, ಅದರ ಆಧಾರದಲ್ಲಿ ಇವತ್ತು ನಮಗೆ sign ಸಿಕ್ಕಿದೆ ಮತ್ತು Court ಕೂಡ ಇದರಲ್ಲಿ observation ಮಾಡಿದೆ. ಇಲ್ಲಿ ಬಹಳ clear ಆಗಿ ಹೇಳಿದ್ದಾರೆ. "The tribunal saying that the MoEF proposes to conduct new survey on the premises as two panels have relied satellite data to identify No Development Zone. But survey will find actual situation of the ground and on the basis of that, a decision would be taken." ಇದು ಅವರ Affidavit.

ಅಧ್ಯಕ್ಷರು:– ರೀ ಬೋಪಯ್ಯನವರೆ, principle ಆಗಿ agree ಮಾಡಿದ್ದಾರೆ.

ಶ್ರೀ ಕೆ.ಜಿ. ಬೋಪಯ್ಯ:– ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲಿ 55 ಗ್ರಾಮ ಇದೆ. ಒಟ್ಟು 1592 ಗ್ರಾಮಗಳಿವೆ. ಇದನ್ನು 2 ತಿಂಗಳಲ್ಲಿ ಇವರು, survey ಮಾಡಿ ಮುಗಿಸುತ್ತೇವೆಂದರೆ ಸಾಧ್ಯವೇ?

ಅಧ್ಯಕ್ಷರು:– ಆಯಿತು, ಭಾಷಣ ಹೊಡೆಯಿರಿ (ವ್ಯಂಗ್ಯವಾಗಿ)

ಶ್ರೀ ಕೆ.ಜಿ. ಬೋಪಯ್ಯ:– ಈ ತರಹ ಆದರೆ ನಾನು ಮಾತನಾಡುವುದಿಲ್ಲ ಅಧ್ಯಕ್ಷರೆ.

ಅಧ್ಯಕ್ಷರು:– ಬಿಡಿರಿ, ಬೇರೆ ಯಾರು ಹೇಳುತ್ತೀರಿ?

ಶ್ರೀ ಕೆ.ಜಿ. ಬೋಪಯ್ಯ:– ಈ ತರಹ 1592 villages ಇವೆ. April 15ರವರೆಗೆ ಮಾತ್ರ time ಇರುವುದು. ಇವರು ground survey ಮಾಡಬೇಕೆಂದು ಪ್ರಮಾಣಪತ್ರ ಇದೆ.

ಅಧ್ಯಕ್ಷರು:– ಅವರು ಒಪ್ಪಿದ್ದಾರಲ್ಲ ರೀ.

ಶ್ರೀ ಕೆ.ಜಿ. ಬೋಪಯ್ಯ:– ಮಾಡಲಿಕ್ಕೆ ಸಾಧ್ಯತೆ ಇದೆಯೇ? ಇವರು ಇನ್ನೂ ಕೂಡ ಏನೂ ಮಾಡಿಲ್ಲ. ಇವರು ಈಗಲೇ ಒಂದು note ಹಾಕಿಬಿಟ್ಟಿದ್ದಾರೆ. ಆ cabinet note ಅನ್ನು ನೋಡಿಬಿಟ್ಟರೆ ಇವರೇನೂ ನಮ್ಮನ್ನು ಬದುಕುವುದಕ್ಕೆ ಬಿಡುವುದಿಲ್ಲ. ಇಲ್ಲಿ ನನ್ನ ಹತ್ತಿರ note ಇದೆ.

ಶ್ರೀ ಹೆಚ್.ಸಿ. ಬಾಲಕೃಷ್ಣ:– ಕೇಂದ್ರ ಸರ್ಕಾರಕ್ಕೆ ಹೇಳಿ ನೀವು time extend ಮಾಡಿಕೊಂಡು ಬನ್ನಿ.

ಶ್ರೀ ಕೆ.ಜಿ. ಬೋಪಯ್ಯ:– ಮಾಡಿದ್ದೇವಲ್ಲ. ಇದರಲ್ಲಿ ಕೇಂದ್ರ ಸರ್ಕಾರದ Tribunal 'as expenditiously as possible' ಎಂದೂ ಹೇಳಿದೆ. ಮತ್ತು ಪರಿಸರವಾದಿಗಳಿಗೆ liberty ಕೊಟ್ಟಿದೆ. If there is any order ಮಾಡಿದರೆ ಮತ್ತೆ ಪುನಃ petition file ಮಾಡುವುದಕ್ಕೆ ಅವರಿಗೆ ಅವಕಾಶ ಕೊಟ್ಟಿದೆ. ಇಷ್ಟು serious ಇರುವಾಗ ಇದನ್ನು ಬಹಳ light ಆಗಿ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ.

ಶ್ರೀ ಬಿ. ರಮಾನಾಥ ರೈ:– ಮಾನ್ಯ ಅಧ್ಯಕ್ಷರೆ, ಸುಮ್ಮಸುಮ್ಮನೆ ಇದನ್ನು ಒಂದು ಸಂಶಯ ಬರುವ ರೀತಿಯಲ್ಲಿ ಮಾತನಾಡುವುದು ಸರಿಯಲ್ಲ. ಅದನ್ನೇ ಒಂದು ಇಟ್ಟುಕೊಂಡು ಮಾತನಾಡುವಂಥದ್ದು ಸರಿಯಲ್ಲ. ಒಕ್ಕಲೆಬ್ಬಿಸುತ್ತಾರೆ,

ಕೀಟನಾಶಕ ಹಾಕಬಾರದು, ಅದು ನಮ್ಮ ವಿಚಾರ ಅಲ್ಲ. ಅದು ಕೇಂದ್ರ ಸರ್ಕಾರ ತೀರ್ಮಾನ ಮಾಡುವಂತಹ ವಿಚಾರ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ಆದರೂ ಕೂಡ ಜನರನ್ನು ಭಯಭೀತರನ್ನಾಗಿ ಮಾಡತಕ್ಕಂಥದ್ದು ಆಗಬಾರದು. ನಾನು ಜನಹಿತವನ್ನು ಗಮನದಲ್ಲಿಟ್ಟುಕೊಂಡು ಮಾಡುತ್ತೇವೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:– ಮಾನ್ಯ ಅರಣ್ಯ ಮಂತ್ರಿಗಳೆ, ಸದನದಲ್ಲಿ ಇಷ್ಟು serious ಆಗಿ ಚರ್ಚೆಯಾಗುತ್ತಿದೆ, ನಿನ್ನೆಯೂ ಕೂಡ urgent ಗೆ ಇನ್ನೊಂದು notice ಕೊಟ್ಟಿದ್ದೇನೆ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ನೀವು ಇಲ್ಲಿ ಕಸ್ತೂರಿ ರಂಗನ್ ವರದಿ ಬಗ್ಗೆ ಮಾತನಾಡಿ. ಅದರ ಬಗ್ಗೆ ನಾವು ಸೂಕ್ತವಾದ ನಿರ್ಧಾರವನ್ನು ತೆಗೆದುಕೊಂಡು ಮಾಡುತ್ತೇವೆ. ನಾಳೆ ನಮ್ಮ ಕಾನೂನು ಸಚಿವರು ಉತ್ತರವನ್ನು ಕೊಡುತ್ತಾರೆ. ಆಮೇಲೆ ಮಾತನಾಡುವ.

ಶ್ರೀ ಕೆ.ಜಿ. ಬೋಪಯ್ಯ:– ಮಾನ್ಯ ಅಧ್ಯಕ್ಷರೆ, ಇದು ಬಂದಾಗ ಕೇರಳದವರು ಏನು ಮಾಡಿದರೆಂದರೆ, ಒಬ್ಬರು retired officer ನೇತೃತ್ವದಲ್ಲಿ ಅದಕ್ಕೇ ಒಂದು separate team ಮಾಡಿ budget allocation ಮಾಡಿ two months ನಲ್ಲಿ ground survey ಮಾಡಿ report ಮಾಡಿ ಕೊಟ್ಟಿದ್ದಾರೆ. ಅವರು ಮಾಡಿದ್ದು ನಮಗೆ ಸಮಾಧಾನ ಅಂತಲ್ಲ. ಅವರ method, how quick they acted ಎಂದು ಅಷ್ಟು ಮಾತ್ರ ನಾನು ಹೇಳಿದ್ದೇನೆಯೇ ಹೊರತು ಕೇರಳದ್ದು ನಮಗೆ ಸಮಾಧಾನ ತಂದಿದೆ ಎಂದು ನಾನು ಹೇಳಲೇ ಇಲ್ಲ. ಹಾಗೇನಾದರೂ ಮಾಡಿದರೆ 1592 ಗ್ರಾಮಗಳದ್ದು actual ಇಲ್ಲದಿದ್ದರೆ natural landscape ಮತ್ತು cultural landscape ಇದರಲ್ಲಿ ನಮಗೆ ಬಹಳ ತೊಂದರೆಯಾಗುತ್ತದೆ ಎನ್ನುವುದನ್ನು ಮಾತ್ರ ತಮ್ಮ ಗಮನಕ್ಕೆ ತರುವುದಕ್ಕೆ ನಾನು ನಿಂತಿದ್ದೇನೆ. ಇದರ

ಹಿನ್ನೆಲೆ ಏನೆಂದರೆ ಇಷ್ಟೆಲ್ಲ ಮಾಡಿ, ಈ Western Ghatsಗೆ ಯಾವ boundary fix ಆಗಿದೆ? ನನಗೆ ಗೊತ್ತಿಲ್ಲ. ಕೊಡಗು ಜಿಲ್ಲೆಯಲ್ಲಿ ಯಾವುದು Western Ghats, ಅದಕ್ಕೆ identify ಮಾಡುವುದಕ್ಕೆ ಯಾವುದೇ ಒಂದು boundary ಅಂತ ಬೇಕಲ್ಲ.

ಶ್ರೀ ಬಿ. ರಮಾನಾಥ ರೈ:– ...ಅಲ್ಲಿಗೆ ಹೋದಾಗ ನಾಣಯ್ಯನವರು ಮಾತನಾಡಿದರು. ಅದನ್ನೂ ಕೂಡ ನಾವು ಗಮನದಲ್ಲಿಟ್ಟುಕೊಂಡು ಮಾಡುತ್ತೇವೆ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:– ನೀವು ಸ್ವಲ್ಪ ಸುಮ್ಮನಿದ್ದರೆ ನಾನು ಎರಡು ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ. ಇದರ ಹಿನ್ನೆಲೆ ಏನಿದೆ ಎಂದರೆ ಒಂದು Western Ghats ಎಂದು ಗುರುತು ಆದಮೇಲೆ ಅದನ್ನು World Heritage ಗೆ ಸೇರಿಸುತ್ತಾರೆ. ಆ World Heritage ಗೆ ಸೇರಿಸಿದರೆ ಮುಂದೆ ಪರಿಣಾಮ ಏನಾಗುತ್ತದೆ ಎಂದರೆ, ನಮ್ಮಲ್ಲಿ ಒಂದು ಮಾತು ಹೇಳುತ್ತೇವೆ, ಈ 6611 KV line ಹಾಕಲಿಕ್ಕೆ ಒಂದು permission ಕೇಳಿದರೆ ಇವರು, ಅಧಿಕಾರಿಗಳು ಯಾವ ರೀತಿ ಉತ್ತರ ಕೊಟ್ಟಿದ್ದಾರೆನ್ನುವುದನ್ನು ನೋಡಿಬಿಟ್ಟರೆ ಈ ಅಧಿಕಾರಿಗಳು ಹೇಗಿದ್ದಾರೆ ಎನ್ನುವುದನ್ನು ನೋಡಬಹುದು. ಇದೊಂದು ಓದಲಿಕ್ಕೆ ದಯವಿಟ್ಟು ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇಲ್ಲಿ Executive Engineer ಗೆ PCCF ರವರು ಒಂದು letter ಬರೆಯುತ್ತಾರೆ.

Diversion of 226 hectares of forest land in Madikeri east reserve forest of Karnangeri village, Madikeri taluk for the purpose of laying 6611 KV lines from the proposed Virajpet sub station to proposed station at Madikeri Kodagu, KPTCL, Kushalnagar. ಇದಕ್ಕೆ ಇವರೇನು ಹೇಳುತ್ತಾರೆಂದರೆ, ನಾನು ಎಲ್ಲವನ್ನೂ ಓದುವುದಿಲ್ಲ. ಯಾವ ರೀತಿ ಈಗಲೇ ಅವರ mind set up ಆಗಿದೆ ಎಂದು ಹೇಳುತ್ತೇನೆ. The Chief Conservator of Forest, Kodagu Circle, Madikeri vide his latter read under above,

reference has submitted with regard to your proposal for diversion of 2.6 forest land in Madikeri East Reserve Forest of Karnangeri village, Madikeri for the purpose of laying 6611 KV from proposed Virajpet, so and so... after inspecting the site both the Deputy Conservation of Forest, Madiketi Division, Madikeri and Chief Conservation of Forest, Kodagu Circle, Madikeri have reported that the transmission line proposed is falling in the limits of Madikeri Reserve Forest having semi-evergreen multi-canopied structure and forms attachment of many perennial streams further owing to ecological fragility of area which falls a part Western Ghats declared as Heritage by UNESCO and they have recommended for the rejection of the proposal. ಇವರು ಆಗಲೇ UNESCO ಗೆ ಸೇರಿಸಿಬಿಟ್ಟಿದ್ದಾರೆ.

ಶ್ರೀ ಬಿ. ರಮಾನಾಥ ರೈ (ಅರಣ್ಯ ಮಂತ್ರಿಗಳು):– ಅದೇನೆಂದು ನೋಡೋಣ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:– Next ಅದೇ ಬರುವುದು. ನೀವು ಕೇಳಲಿಕ್ಕೇ ತಾಳ್ಮೆ ಇಲ್ಲ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:– ಈ ತರಹ ಒಬ್ಬ PCCF ಕೊಟ್ಟರೆ ಅದೂ ಮಡಿಕೇರಿ town ಒಳಗೆ ಅಲ್ಲಿ ಯಾವ ಹೊಳೆಯೂ ಹರಿಯುವುದಿಲ್ಲ, stream ಇಲ್ಲ, ಇವರ ಭವನವೂ ಅಲ್ಲಿಯೇ ಇದೆ. ಅದರ ಪಕ್ಕದಲ್ಲಿ ಎರಡು poles ಹಾಕುವುದಕ್ಕೆ, UNESCO ಗೆ ಸೇರಿಸಿದ್ದಾರೆಂದು ಬರೆದಿದ್ದಾರಲ್ಲ, ಈ ಅಧಿಕಾರಿಯನ್ನು ಏನು ಮಾಡಬೇಕು ಹೇಳಿ?

ಅಧ್ಯಕ್ಷರು:– ನೇಣು ಹಾಕಬೇಕು.

ಶ್ರೀ ಕೆ.ಜಿ. ಬೋಪಯ್ಯ:– Suspend ಮಾಡಬೇಕು ಅಷ್ಟೇ.

ಅಧ್ಯಕ್ಷರು:– ಮಾಡಿ

ಶ್ರೀ ಕೆ.ಜಿ. ಬೋಪಯ್ಯ:– ನಾನು ಮಾಡುವುದಾಗಿದ್ದರೆ ಏನೋ ಮಾಡುತ್ತಿದ್ದೆ. ಅದು ಬೇರೆ.

ಅಧ್ಯಕ್ಷರು:– ಎಂಥ ಮಾಡಿದಿರಿ?

ಶ್ರೀ ಕೆ.ಜಿ. ಬೋಪಯ್ಯ:– ನನಗೆ ಅಧಿಕಾರ ಕೊಟ್ಟರೆ ಮಾಡುತ್ತಿದ್ದೆ.

ಅಧ್ಯಕ್ಷರು:– ಆ ಪಾರಂಪರಿಕ ಅರಣ್ಯ ಕಾನೂನು 2008ರಲ್ಲಿ ಬಂತು. ಎಲ್ಲಾ ಇಲ್ಲಿಯೇ ಕುಳಿತಿದ್ದೀರಿ.

ಶ್ರೀ ಕೆ.ಜಿ. ಬೋಪಯ್ಯ:– ನಮ್ಮ ಜಿಲ್ಲೆಯಲ್ಲಿ ಆ ತರಹ ಇಲ್ಲ. ನಾವು 3 ಸಾವಿರ ಜನರಿಗೆ ಹಕ್ಕುಪತ್ರ ಕೊಟ್ಟಿದ್ದೇವೆ.

ಅಧ್ಯಕ್ಷರು:– ST ಗಳಿಗೆ. ಬಾಕಿಯವರಿಗೆ?

ಶ್ರೀ ಕೆ.ಜಿ. ಬೋಪಯ್ಯ:– ಇತರರಿಗೂ ಕೊಡುವಂಥ ಪ್ರಯತ್ನ ಮಾಡಿದ್ದಾರೆ. ಆದರೆ, lenient view ತೆಗೆದುಕೊಳ್ಳುತ್ತಿಲ್ಲ. 75 ವರ್ಷ ಎಂದು ಇದೆಯಲ್ಲ,

ಅಧ್ಯಕ್ಷರು:– ಹೌದು.

ಶ್ರೀ ಕೆ.ಜಿ. ಬೋಪಯ್ಯ:– 75 ವರ್ಷ ಎಂದು prove ಮಾಡುವುದು ಸ್ವಲ್ಪ ಕಷ್ಟ. ಅವರು lenient view ತೆಗೆದುಕೊಂಡರೆ ಪರವಾಗಿಲ್ಲ.

ಅಧ್ಯಕ್ಷರು:– ಆಯಿತು, ಹೇಳಿ.

ಶ್ರೀ ಕೆ.ಜಿ. ಬೋಪಯ್ಯ:– ಇಷ್ಟೇ. ಈ ರೀತಿ ಇದರ ಹಿನ್ನೆಲೆ ಇರುವುದರಿಂದ UNESCO ಗೆ ಸೇರಿಸಬಹುದೆಂದಿದ್ದಾರೆ.

ಅಧ್ಯಕ್ಷರು:– ಇದಕ್ಕೆ ಕಾರಣ ಏನು ಎಂದರೆ, ಅರಣ್ಯ ಇಲಾಖೆ ಎನ್ನುವುದು ಈ ದೇಶದಲ್ಲಿ ಒಂದು ಸಾಮ್ರಾಜ್ಯ ಎಂದು ಹೇಳಿ ಬಿಂಬಿಸಿಬಿಟ್ಟಿದ್ದಾರೆ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:– ಅದಕ್ಕೇ ನಾವು . . . . ಹೇಳಿದ್ದು.

(ಗೊಂದಲ)

ಅಧ್ಯಕ್ಷರು:– ಏಕೆ ಎಂದರೆ, ಚುನಾಯಿತರಾಗಿ ಬಂದಿರತಕ್ಕಂಥ ನಾವು ಲೋಕಸಭೆಗೆ ಹೋದ ಮೇಲೆ ಅದಕ್ಕೆ ತಲೆಬಗ್ಗಿಸಿರುವುದೇ ಕಾರಣ. ಈಗ ಧ್ವನಿ ಎತ್ತಿದ್ದಾರಲ್ಲ, ಎತ್ತಿ, ಈಗ ಎಲ್ಲಾ ಸರಿಯಾಗುತ್ತದೆ.

ಶ್ರೀ ಕೆ.ಜಿ. ಬೋಪಯ್ಯ:– ಅಷ್ಟೇ. ನಾನು future consequence ಏನಾಗಬಹುದು ಎನ್ನುವುದಕ್ಕೆ ಈ ಉದಾಹರಣೆ ಕೊಟ್ಟೆ.

ಅಧ್ಯಕ್ಷರು:– ಖಂಡಿತ.

ಶ್ರೀ ಕೆ.ಜಿ. ಬೋಪಯ್ಯ:– Future Consequence ಇವರ ಉದ್ದೇಶವೇನೆಂದರೆ, Western Ghats ಎಂದು ಒಂದು ಸಲ ESA ಎಂದು declare ಮಾಡಿಸಿಬಿಟ್ಟು, World Heritage UNESCO ಗೆ ಸೇರಿಸಿಬಿಟ್ಟರೆ ಆಮೇಲೆ ನಾವು ಏನೂ ಮಾತನಾಡುವ ಹಾಗಿಲ್ಲ. ಮೊನ್ನೆ ಯಾರೋ ಹೇಳುತ್ತಿದ್ದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆ ಬಾಹುಬಲಿಯದ್ದು ಒಂದು ಗೋಡೆ ತೆಗೆಯಲಿಕ್ಕೆ Central Government ನಲ್ಲಿ ಒದ್ದಾಡಿದರೂ ಕೊಡಲಿಲ್ಲ ಎಂದು ಹೇಳುತ್ತಿದ್ದರು. ಈ ಪರಿಸ್ಥಿತಿಗೆ ಆಗಬಾರದು. ಅದಕ್ಕೆ ಈಗಲೇ ನಾವು ಎಚ್ಚರವಹಿಸಿಕೊಳ್ಳಬೇಕು.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:– ಅದೂ UNESCO ಗೇ ಸೇರಿದೆ.

ಶ್ರೀ ಬಿ. ರಮಾನಾಥ ರೈ:– ತಪ್ಪು ಮಾಹಿತಿಗಳು ಹೋಗಬಾರದು.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:– ತಪ್ಪು ಮಾಹಿತಿಯಲ್ಲ. ನಾನು ವಿಚಾರ ತಿಳಿದು ಮಾತನಾಡುತ್ತೇನೆ.

ಅಧ್ಯಕ್ಷರು:– ಆಯಿತು, ತೆಗೆದುಕೊಳ್ಳಿ.

ಶ್ರೀ ಕೆ.ಜಿ. ಬೋಪಯ್ಯ:– ನಾನು ತಪ್ಪು ಮಾಹಿತಿ ಕೊಡುವವನಲ್ಲ.

ಅಧ್ಯಕ್ಷರು:– ಆಯಿತು.

ಶ್ರೀ ಕೆ.ಜಿ. ಬೋಪಯ್ಯ:– ಅದು UNESCO ಗೆ ಸೇರಿದೆ.

ಅಧ್ಯಕ್ಷರು:– ಆಯಿತು ಹೇಳಿ.

ಶ್ರೀ ಕೆ.ಜಿ. ಬೋಪಯ್ಯ:– ನೀವು ಪ್ರಮಾಣ ಮಾಡುತ್ತೀರಿ. ಎಲ್ಲಾದಕ್ಕೂ ಮಾಡುತ್ತೀರಿ.

ಅಧ್ಯಕ್ಷರು:– ಆಯಿತು. ಈಗ ಬೋಪಯ್ಯನವರೆ, ನಾನು Law Minister ರವರಿಗೆ ಹೇಳಿದ್ದೇನೆ. ಅವರು, ಇವರು ಸೇರಿಕೊಂಡು ಒಂದು ಗಂಟೆ ಸಮಯ ಕುಳಿತುಕೊಂಡು ಸ್ವಲ್ಪ personal ಆಗಿ discuss ಮಾಡಿದರೆ ಒಳ್ಳೆಯದು.

ಶ್ರೀ ಕೆ.ಜಿ. ಬೋಪಯ್ಯ:– Ground survey ಮಾಡದೇ ಹೋದರೆ ನಾಳೆ ಆ Green Tribunal ನಲ್ಲಿ ನಮಗೆ ತೊಂದರೆ ಆಗಬಹುದು.

(ಗೊಂದಲ)

ಅಧ್ಯಕ್ಷರು:– ಅದಕ್ಕೇ ನಾನು ಅಲ್ಲಿ ಕುಳಿತಿದ್ದಾಗ ಹೇಳಿದ್ದೇನೆ. ಆ Field Committee ಮಾಡಿದ್ದಾರೆ.

ಶ್ರೀ ಕೆ.ಜಿ. ಬೋಪಯ್ಯ:– ಅವರು ಒಪ್ಪಿಕೊಳ್ಳಲಿ.

ಅಧ್ಯಕ್ಷರು:– ಅದಕ್ಕೆ Law Minister ರವರಿಗೆ ಹೇಳಿ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು, ಪಶು ಸಂಗೋಪನಾ ಸಚಿವರು):– In principle we have agreed.

ಶ್ರೀ ಕೆ.ಜಿ. ಬೋಪಯ್ಯ:– ನಿಮ್ಮ ಹತ್ತಿರ staff ಇಲ್ಲ. 1592 ಗ್ರಾಮಗಳ survey ನಾವು ಮಾಡುತ್ತೇವೆ, ಎರಡು ತಿಂಗಳೊಳಗೆ ಎಂದರೆ ಸುಲಭದ ಕೆಲಸವೇ?

ಶ್ರೀ ಬಿ. ರಮಾನಾಥ ರೈ:– ಅಪ್ಪಚ್ಚು ರಂಜನ್ ಮತ್ತು ನಮ್ಮ ಬೋಪಯ್ಯನವರು ಒಂದು ರಸ್ತೆ ಮಾಡಿದ್ದಾರೆ.

ಶ್ರೀ ಕೆ.ಜಿ. ಬೋಪಯ್ಯ:– Survey ಮಾಡಲಿ.

ಶ್ರೀ ಬಿ. ರಮಾನಾಥ ರೈ:– ಇವರ ಸರ್ಕಾರ ಇದ್ದಾಗಲೇ ಇವರ ಮೇಲೆ ಆ ರಸ್ತೆ ಮಾಡಿದ್ದಕ್ಕೆ case ಮಾಡಿದ್ದಾರೆ. ನಾವು ಇದ್ದಾಗ ಅಲ್ಲ.

(ಗೊಂದಲ)

ಅಧ್ಯಕ್ಷರು:– ಆಯಿತು, ಹೇಳಿ.

ಶ್ರೀ ಬಿ. ರಮಾನಾಥ ರೈ:– ಅದು ವಸ್ತುಸ್ಥಿತಿ. Reserved Forest ಒಳಗಿರುವ ವಸ್ತುಸ್ಥಿತಿ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:– Case ಸರ್ಕಾರ ಮಾಡಿದ್ದು.

(ಗೊಂದಲ)

ಅಧ್ಯಕ್ಷರು:– ನೀವು ಹೇಳುವುದಕ್ಕೆ ಹೋಗಬೇಡಿ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:– ನಮ್ಮ ಸರ್ಕಾರ ಮಾಡಿಲ್ಲ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– Criminal case, ಇವರದ್ದೇ ಸರ್ಕಾರ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ಇವರಿಬ್ಬರ ಮೇಲೆ ಇವರದ್ದೇ ಸರ್ಕಾರ ಇದ್ದಾಗ criminal case ಆಗಿದ್ದು ಅದಕ್ಕೆ ಯಾರು ಜವಾಬ್ದಾರರು?

(ಗೊಂದಲ)

ಅಧ್ಯಕ್ಷರು:– ಇಬ್ಬರೂ ಜೊತೆಗೆ ಸೇರಬೇಡಿ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:– ನಮ್ಮ ಮೇಲೆ ಯಾವ ಸರ್ಕಾರವೂ case ಮಾಡಿಲ್ಲ.

ಅಧ್ಯಕ್ಷರು:– ಆಯಿತು, ಬಿಡಿ.

ಶ್ರೀ ಕೆ.ಜಿ. ಬೋಪಯ್ಯ:– ನಾವು Supreme Court ಆದೇಶವನ್ನು violation ಮಾಡಿದ್ದೇವೆಂದು ಯಾರೋ ಪರಿಸರವಾದಿಗಳು contempt case ಹಾಕಿದ್ದು. ಸುಮ್ಮನೆ ನೀವು ವಿಚಾರ ತಿಳಿಯದೆ, ಜವಾಬ್ದಾರಿ ಸ್ಥಾನದಲ್ಲಿದ್ದು ಮಾತನಾಡಬೇಡಿ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:– Contempt case ಎಂದು ಹೇಳಿದ್ದೇವೆ.

ಶ್ರೀ ಬಿ. ರಮಾನಾಥ ರೈ:– ಹಿಂದುಗಡೆ ಅಪ್ಪಚ್ಚು ರಂಜನ್ ಇದ್ದಾರೆ.

ಶ್ರೀ ಎಂ.ಪಿ. ಅಪ್ಪಚ್ಚು (ರಂಜನ್):– Contempt case ನ proceedings ಹಾಕಿದೆ ಹೊರತು, ಅಲ್ಲಿ I.A. file ಮಾಡಿದೆಯೇ ಹೊರತು ಇಲ್ಲಿ case book ಮಾಡಿಲ್ಲ.

ಶ್ರೀ ಕೆ.ಜಿ. ಬೋಪಯ್ಯ:– FIR ಏನೂ ಹಾಕಿಲ್ಲ.

ಶ್ರೀ ಬಿ. ರಮಾನಾಥ ರೈ:– ಆದರೆ, case, ಹೇಳಿದ್ದೀರಿ.

ಶ್ರೀ ಕೆ.ಜಿ. ಬೋಪಯ್ಯ:– ಹೌದು. Contempt case.

ಶ್ರೀ ಬಿ. ರಮಾನಾಥ ರೈ:– ಅಪ್ಪಚ್ಚು ರಂಜನ್ ಇದೇ ಸದನದಲ್ಲಿ ಇದೆ ಕಡತವನ್ನು ತೆಗೆಯೋಣ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:– ಮಾನ್ಯ ಅಧ್ಯಕ್ಷರೆ, ಇದೇನು? ಸುಮ್ಮನೆ ಎದ್ದುನಿಂತುಕೊಂಡು ಮಾತನಾಡುವುದು.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ನಮ್ಮ ಮೇಲೆ case ಮಾಡಿದ್ದಾರೆಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:– ಹೇಳುವುದು ತಪ್ಪು.

(ಗೊಂದಲ)

ಅಧ್ಯಕ್ಷರು:– ಆಯಿತು. ನೀವು ಹೇಳಿ.

ಶ್ರೀ ಕೆ.ಜಿ. ಬೋಪಯ್ಯ:– ಆಯಿತು ಅಧ್ಯಕ್ಷರೆ, ಹಾಗಾಗಿ, ಇಷ್ಟನ್ನು ಮಾಡದೇ ಹೋದರೆ future ನಮಗೆ ತೊಂದರೆ ಆಗಬಹುದು.

ಅಧ್ಯಕ್ಷರು:– ಖಂಡಿತ.

ಶ್ರೀ ಕೆ.ಜಿ. ಬೋಪಯ್ಯ:– ಮುಂದೆ ತೊಂದರೆಯಾಗುತ್ತದೆ. ನೀವು ಹೇಳಿದಷ್ಟು ಸುಲಭದಲ್ಲಿ ground survey ಮಾಡುವಂಥದ್ದಲ್ಲ. ಅದಕ್ಕೆ ಒಂದು separate team ಮಾಡಿ. ವ್ಯವಸ್ಥೆಗಳನ್ನು ಮಾಡದೇ ಹೋದರೆ ತೊಂದರೆಯಾಗುತ್ತದೆ.

ಶ್ರೀ ಬಿ. ರಮಾನಾಥ ರೈ:– ಮಾನ್ಯ ಸಭಾಧ್ಯಕ್ಷರಿಗೂ ಅದರಲ್ಲಿ ಬಹಳಷ್ಟು ಕಾಳಜಿ ಇದೆ. ನಿಮಗೂ ಕಾಳಜಿ ಇದೆ. ನಮಗೂ ಕಾಳಜಿ ಇದೆ.

ಶ್ರೀ ಕೆ.ಜೆ. ಬೋಪಯ್ಯ:– ನಾನು ಮಾತನಾಡುತ್ತಿದ್ದೇನೆ.

ಶ್ರೀ ಬಿ. ರಮಾನಾಥ ರೈ:– ನಾವೂ ಕೂಡ ಹೇಳಬಹುದು.

(ಗೊಂದಲ)

ಶ್ರೀ ಕೆ.ಜೆ. ಬೋಪಯ್ಯ:– ನೀವು ಏನೂ ಮಾಡದೇ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ನೀವು ಮಾತ್ರ ಎಂದು ಹೇಳತಕ್ಕಂಥದ್ದು ಎನ್ನುವುದು ಬರಬಾರದು.

ಅಧ್ಯಕ್ಷರು:– ಆಯಿತು.

ಶ್ರೀ ಕೆ.ಜೆ. ಬೋಪಯ್ಯ:– ಇವರು Green Tribunal ಮುಂದೆ ಕಾನೂನು ಮಂತ್ರಿಗಳಿಗೆ ನಾನು ಬೆಳಗಾವಿಯ ಅಧಿವೇಶದಲ್ಲಿ ಪ್ರಸ್ತಾಪ ಮಾಡಿದಾಗ ನಾವು objection ಹಾಕುತ್ತೇವೆ ಎಂದು ಹೇಳಿದ್ದರು ನಾನು ಮತ್ತೆ ಬೇರೆ ಮಾತನಾಡಬೇಕಾಗುತ್ತದೆ. ಇವರೇನೂ objection ಹಾಕಿಲ್ಲ. ಏನೂ ಮಾಡಿಲ್ಲ. ಕೇಂದ್ರಸರ್ಕಾರ affidavit ಅನ್ನೆಲ್ಲ ಇದರಲ್ಲಿ comment ಮಾಡಿದ್ದಾರೆ, ambiguity ಹಾಕಿದ್ದಾರೆ, ಇನ್ನೊಂದು ಹಾಕಿದ್ದಾರೆ. ಆದರೂ ಅದೃಷ್ಟವಶಾತ್ ಅವರು time ಕೊಟ್ಟಿದ್ದಾರೆ. ಅದರ ಸದುಪಯೋಗ ಮಾಡಿಕೊಳ್ಳಬೇಕೆಂದು ಇಷ್ಟೆಲ್ಲ ಹೇಳುತ್ತಿದ್ದೇನೆಯೇ ಹೊರತು ಬೇರೆ ಯಾವ ಉದ್ದೇಶವೂ ಇಲ್ಲ. ನಮ್ಮ ಬದುಕಿನ ಪ್ರಶ್ನೆಯಾಗುತ್ತದೆ.

ಅಧ್ಯಕ್ಷರು:– ನೀವು ಮಾತನಾಡುವುದಕ್ಕೆ ನಾನು ಅಡ್ಡ ಬರುವುದಿಲ್ಲ. ಸಮಯದ ಅಭಾವದಿಂದಾಗಿ ನಾನು ಹೇಳುತ್ತೇನೆ. ಇಲ್ಲದಿದ್ದರೆ ಬೆಳಗ್ಗೆ ತೆಗೆದುಕೊಳ್ಳೋಣ ಬಿಡಿ.

ಶ್ರೀ ಕೆ.ಜಿ. ಬೋಪಯ್ಯ:– ಆಯಿತು ಅಧ್ಯಕ್ಷರೆ.

ಶ್ರೀ ಎಂ.ಪಿ. ಅಪ್ಪಚ್ಚು (ರಂಜನ್):– ಬೆಳಗ್ಗೆ ಎಂದರೆ ಅಧಿಕಾರಿಗಳು misguide ಮಾಡಿಬಿಡುತ್ತಾರೆ ಎಂದು ನನಗೇ ಒಬ್ಬರು ಅಧಿಕಾರಿ ಹೇಳಿದರು. ನೀವು buffer zone ಗೆ ಸೇರಿಸಿಬಿಡಿ. ನಿಮ್ಮ ಒಂದು ಗ್ರಾಮಪಂಚಾಯಿತಿಗೆ 2 ಸಾವಿರ ರೂಪಾಯಿ development ಗೆ ಬರುತ್ತದೆ ಎಂದರು. ನಾನು immediately question ಕೇಳಿದೆ. ನಮ್ಮ ರಾಜ್ಯದಲ್ಲಿ 5 ಸಾವಿರ ಜಿಲ್ಲರೆ ಗ್ರಾಮ ಪಂಚಾಯಿತಿಗಳು X 2000 ಎಷ್ಟು ಹಣ ಕೊಡಬೇಕೆಂದು ಕೇಳಿ ಎಂದು ಹೇಳಿದೆ. ಈ ವಿಷಯವನ್ನು ಏಕೆ ಇವತ್ತು ಹೇಳುತ್ತಿದ್ದೇನೆಂದರೆ, ಅಧಿಕಾರಿಗಳು misguide ಮಾಡುವುದು ಬೇಡ ಎನ್ನುವ ವಿಚಾರಕ್ಕೆ ಹೇಳುತ್ತಿದ್ದೇನೆ.

ಅಧ್ಯಕ್ಷರು:– ಆಯಿತು, ಹೇಳಿ.

ಶ್ರೀ ಕೆ.ಜಿ. ಬೋಪಯ್ಯ:– ಅಷ್ಟೇ.

ಅಧ್ಯಕ್ಷರು:– ನಾಳೆ ಒಂದು meeting ಮಾಡಿ. ನೀವು ಹೇಳಿ.

ಶ್ರೀ ಡಿ.ಎನ್. ಜೀವರಾಜ್:– ಎರಡೇ ನಿಮಿಷಗಳಲ್ಲಿ ಮುಗಿಸುತ್ತೇನೆ.

ಅಧ್ಯಕ್ಷರು:– ಆಯಿತು.

ಶ್ರೀ ಡಿ.ಎನ್. ಜೀವರಾಜ್:– ಕಾನೂನು ಮಂತ್ರಿಗಳು ಕೂಡ ಇದ್ದಾರೆ. ನಾನು ರಮಾನಾಥ ರೈ ರವರಿಗೆ ಮೊದಲು ಕೈಮುಗಿದಿದ್ದೇನೆ. First ಚೌಡಿಗೆ ಬಾಳೆಹಣ್ಣು ಹಾಕಿದಹಾಗೆ. ದಯವಿಟ್ಟು ನನ್ನ ಭಾಷಣವಾಗುವವರೆಗೆ ಏಳುವುದು ಬೇಡ. ನಾನು ಅವರಿಗೆ ಕೈಮುಗಿದುಬಿಟ್ಟಿದ್ದೇನೆ. ಹಾಗಾಗಿ, ಅವರು ಏಳುವುದಿಲ್ಲ. ಅವರ ಭಾವನೆ ಒಳ್ಳೆಯದಿದೆ, ಆತ್ಮ ಒಳ್ಳೆಯದಿದೆ.

ಅಧ್ಯಕ್ಷರು:– ಆಯಿತು. ವಿಷಯಕ್ಕೆ ಬನ್ನಿ.

ಶ್ರೀ ಡಿ.ಎನ್. ಜೀವರಾಜ್:– ಇವರು ಸದುದ್ದೇಶದಿಂದ cabinet committee ಮಾಡಿದ್ದಾರೆ. Cabinet committee ಯನ್ನು ಕೇವಲ ಮಾಡಿದ್ದಲ್ಲ

ಅಲ್ಲಿಗೆ ಬಂದಿದ್ದಾರೆ. ತಮ್ಮ ಸಲಹೆಯಂತೆ ಬಂದು ಅಲ್ಲಿ ತಾಳ್ಮೆಯಿಂದ ಕುಳಿತು ಎಲ್ಲರೂ ಹೇಳುವುದನ್ನು ಕೇಳಿದ್ದಾರೆ. ನಾವು ಅದರ ಬಗ್ಗೆ question ಮಾಡುವುದಿಲ್ಲ. ನನ್ನ ಪ್ರಶ್ನೆ ಏನೆಂದರೆ, Court ಮುಂದೆ Cabinet Sub Committee ಯ ತೀರ್ಮಾನ ತೀರ್ಮಾನವಾಗಲ್ಲ. ಇದನ್ನು ಹೇಳಿದ್ದು ಯಾರೆಂದರೆ, ಪ್ರಕಾಶ್ ಜಾವೇಡ್‌ಕರ್ ಎನ್ನುವಂಥ ಈ ದೇಶದ ಪರಿಸರ ಮಂತ್ರಿಗಳನ್ನು ನಾನು, ಅಪ್ಪಚ್ಚು ರಂಜನ್, ರವಿ, ವಿಶ್ವೇಶ್ವರ ಹೆಗಡೆಯವರು ಮೊನ್ನೆ ಭೇಟಿ ಮಾಡಿದ್ದೆವು. ಆಗ ಅವರೇನು ಹೇಳಿದರೆಂದರೆ, cabinet subcommittee ಎಲ್ಲಾ ಒಳ್ಳೆಯ ಬೆಳವಣಿಗೆ ಒಳ್ಳೆಯದಾಗುತ್ತದೆ. ನನಗೆ ಅರ್ಥವಾಗುತ್ತದೆ. Court ನವರು ಗ್ರಾಮಸಭೆಗಳ ತೀರ್ಮಾನವನ್ನು ಬಹಳ ಪ್ರಮುಖವಾಗಿ ತೆಗೆದುಕೊಳ್ಳುತ್ತಾರೆ. ಗ್ರಾಮ ಸಭೆಗಳ ತೀರ್ಮಾನದ ಅವಶ್ಯಕತೆ ಇದೆ. ಅದನ್ನು ಮಾಡಿಸಿ ಎಂದು ಹೇಳಿದರು. ನಾವು ಇವರಿಗೆ ಕೇಳುತ್ತಿರುವುದು, ಏಪ್ರಿಲ್ 15ಕ್ಕೆ ಇನ್ನು just 2 ತಿಂಗಳಿದೆ. ಇವರು 29.9.2014ಕ್ಕೆ DC ಗಳಿಗೆ ಇವರೊಂದು ಆದೇಶ ಕೊಡುತ್ತಾರೆ. ನೀವು ಈ ತಕ್ಷಣದಿಂದ ಗ್ರಾಮಸಭೆಗಳನ್ನು ಮಾಡಿ ಅಲ್ಲೇನಿದೆ field ಮಾಹಿತಿ ತನ್ನಿ ಎಂದು ಕೊಡುತ್ತಾರೆ. ದಿ:24.11.2014ರವರೆಗೆ ಆ file ಹಾಗೇ DC Office ನಲ್ಲೇ ಇರುತ್ತದೆ. 27ನೇ ತಾರೀಖು central team ಬರುತ್ತದೆ ಎನ್ನುತ್ತಾರೆ. ಆ ತರಹ ಮತ್ತೆ ಇದಾಗಬಾರದು. ನೀವು ಇದಕ್ಕೆ ಹೆಚ್ಚು ಕಳಕಳಿ ಹೊಂದಿದ್ದೀರಿ. ಆ ಕಳಕಳಿಗಾಗಿ ನಾನೇನು ಕೇಳುತ್ತೇನೆಂದರೆ, ಈಗ satellite picture ತೆಗೆದಿರುವುದರಿಂದ rubber ತೋಟ, ಅಡಿಕೆ ತೋಟ, coffee ತೋಟ, ತೆಂಗಿನ ತೋಟಗಳೆಲ್ಲವೂ ಮೇಲುಗಡೆಯಿಂದ ಕಾಡಾಗಿ ಕಂಡಿವೆ. 20% ಗೆ ತೆಗೆದುಕೊಂಡಿದ್ದರಿಂದ ಅವೆಲ್ಲವೂ ಮಲೆನಾಡು ಪೂರ್ತಿ ನಿಮ್ಮ ಊರು, ನಮ್ಮ ಊರು ಎಲ್ಲವೂ ESA ಒಳಗಡೆ ಸೇರಿಕೊಂಡಿವೆ. ಇಲ್ಲಿ field verification ಮಾಡಿದಾಗ natural landscape, cultural landscape clear ಆಗಿಬಿಡುತ್ತದೆ. ಆಗೇನಾಗುತ್ತದೆಂದರೆ, ಬೆಳೆಗಳು ಬೇರೆ ಬೇರೆ ಎನ್ನುವಂಥ ಅಡಕೆ ತೋಟ ಯಾವುದು? Rubber ತೋಟ ಯಾವುದು? Coffee ತೋಟ

ಯಾವುದು? ಅವನ ಬೆಳೆ ಯಾವುದು? ಅದು ತೀರ್ಮಾನವಾದಾಗ ಬಹುಶಃ ಇವರಿಗೆ, ಪಾಪ, ನಮ್ಮ ಮಂತ್ರಿಗಳು ಹೇಳಿದ್ದಾರೆ, ನಾವು 50% ಗೆ ಏರಿಸುತ್ತೇವೆಂದು ಹೇಳಿದ್ದಾರೆ. ಅವರ ಮನಸ್ಸಲ್ಲಿ ಒಳ್ಳೆಯದಿದೆ. ಅದಕ್ಕಿಂತ ಕಡಿಮೆ ಮಾಡುತ್ತೇನೆಂದು ಹೇಳಿದ್ದಾರೆ. ಒಳ್ಳೆಯದು ಹೇಳಿದ್ದಾರೆ. ಆಗ 1500 ಗ್ರಾಮ ಎಂದು ಇರುವಂಥದ್ದು 400–500 ಗ್ರಾಮಗಳಿಗೆ ಬಂದುಬಿಡಬಹುದು. ಅದಕ್ಕೆ ಇವರಿಗೆ ಹೇಳುವುದು ಏನೆಂದರೆ, ಇನ್ನು 2 ತಿಂಗಳಿಗೆ ದಯಮಾಡಿ ನಿಮ್ಮ ಜಿಲ್ಲಾಧಿಕಾರಿಗಳಿಗೋ, CEO ಗಳಿಗೂ ಸ್ಪಷ್ಟವಾಗಿ ಅಲ್ಲಿ field verification ಮಾಡುವಂಥ ಸ್ಪಷ್ಟ ಆದೇಶವನ್ನು ಕೊಡಿ. ನೀವು ಬಂದಿರುವುದರಿಂದ ಜಿಲ್ಲಾ ಕೇಂದ್ರದಲ್ಲಿ ಒಂದು ಸಭೆಯಾಗಿದೆ, ಭಾಷಣವಾಗಿರುವುದು ಬಿಟ್ಟರೆ ಅಲ್ಲಿ field ನಲ್ಲಿ ಆಗಿಲ್ಲ. ನನ್ನ ಊರು ದ್ವಾರಮಕ್ಕಿಯಲ್ಲಿ ಅಡಿಕೆ ತೋಟವಿದೆ. ಇದರಲ್ಲಿ ಯಾವುದು natural ಯಾವುದು cultural ಎಂದು ಹೇಳುವ picture ಇವರ ಹತ್ತಿರ ಎಲ್ಲಿದೆ? ಇದನ್ನು ಮಾಡಿಸಿ ಎಂದು ಹೇಳುವುದಷ್ಟೇ ಬಿಟ್ಟರೆ ನಾವೇನು ಭಾಷಣ ಮಾಡುವುದು? ರಾತ್ರಿ 9 ಗಂಟೆಗೆ ಭಾಷಣ ಮಾಡುವ ಚಟ ಏನಿಲ್ಲ. ತಾವು ದಯಮಾಡಿ ತಮ್ಮ ಕಳಕಳಿಯ ಮಧ್ಯೆದಲ್ಲಿ field verification ಮಾಡಿಸಿ. ಮತ್ತು ಜನಸವತಿ ಏಲ್ಲಿದೆ, ಊರು ಏಲ್ಲಿದೆ, ಅದಕ್ಕೆ buffer zone ಬೇಕೋ ಬೇಡವೋ ಇದನ್ನು ತೀರ್ಮಾನ ಮಾಡುವಂಥದ್ದನ್ನು ಮಾಡಿ. court ಮುಂದೆ ತೆಗೆದುಕೊಂಡು ಹೋಗಿ ಕೊಡುವಂಥ ಕೆಲಸವನ್ನು ದಯವಿಟ್ಟು ಇವರು ಮಾಡಬೇಕು. ಅದು ಬಿಟ್ಟು ಹಠ, ನೀವು ಮಾಡಿದಿರಿ ನಾವು ಮಾಡಿದಿರಿ ಎಂದು ಹೇಳಿದರೆ, ಕೊನೆಗೆ ಯಾರೂ ಮಾಡಿದ್ದು ಇಲ್ಲ. ಜನ ರಸ್ತೆಗೆ ಬಂದು ಮಲೆನಾಡಿನವರೆಲ್ಲ ಗುಳೇ ಹೋಗುವಂಥ ಕಾಲ ಬಂದಾಗ ಆ ದಿವಸ ಯಾವನೋ ಒಬ್ಬ ಹುಟ್ಟಿಕೊಂಡು, ಮಲೆನಾಡಿನ ಇದೆನ್ನೆಲ್ಲವನ್ನು ಒಂದು ಪ್ರತ್ಯೇಕ ರಾಜ್ಯವನ್ನಾಗಿ ಮಾಡದಿದ್ದರೆ ನಾವು ಉಳಿಯುವುದಿಲ್ಲ ಎಂದು ಹೇಳುತ್ತಾನೆ. ಆ ರೀತಿ ಆಗುವುದು ಬೇಡ. ಈಗಲೇ ಅದಕ್ಕೆ ನಾವು ಒಳ್ಳೆಯ ರೀತಿಯಲ್ಲಿ ಒಳ್ಳೆಯದನ್ನು ಮಾಡುವಂಥ ಕಾರ್ಯಕ್ರಮ ಮಾಡೋಣ. ತಮ್ಮ

ಮನಸ್ಸಿನಲ್ಲಿ ಒಳ್ಳೆಯದು ಇದೆ. ಆದರೆ, ಆದೇಶವನ್ನು ಕೆಳಗಡೆ ಇರತಕ್ಕಂಥ ಅಧಿಕಾರಿಗಳಿಗೆ ಕಳುಹಿಸಿ. ಇವರ ಹತ್ತಿರ ಜನ ಇದ್ದಾರೆ. ಅಲ್ಲಿ VA, RI, PDO, Secretary, ಇದ್ದಾರೆ. ಅವರ ಮೂಲಕ ನಿಮಗೆ ಒಳ್ಳೆಯದನ್ನು ತರಿಸುವುದಕ್ಕೆ ನಿಮಗೆ ಸಾಧ್ಯ, ಆ ಕೆಲಸ ಮಾಡಬೇಕೆಂದು ತಮ್ಮ ಮೂಲಕ ಕೇಳುತ್ತಾ, ಬೇರೆ ಏನೂ ಇವರ ಹತ್ತಿರ ನಾವು ಕೇಳುವುದಿಲ್ಲ. ಇವರು ಮಾಡಿಸಬೇಕಾಗಿರುವುದು ಅಲ್ಲಿ ಒಂದು field ನಲ್ಲಿ survey ನಡೆಯಬೇಕು. Satellite survey ಬೇಡ. Field survey ಮಾಡಿಸಿ. ನಮಗೆ manual survey ಪಕ್ಕಾ. ಅಷ್ಟನ್ನು ಮಾಡಿ ಎಂದು ಕೈ ಮುಗಿದು ಕೇಳಿದ್ದೇವೆ.

ಅಧ್ಯಕ್ಷರು:– ಈಗ Javadekar ಗೆ ಒಂದು ಮಾತು ಹೇಳಿಬಿಡಿ. ಕಾನೂನು ಮಾಡಿ ಅಧಿಕಾರ ನಿಮಗೆ ಈಗ ಇದೆ. ಆ green zone ನಲ್ಲಿರುವ ಆ board ಇದೆಯಲ್ಲ..

ಶ್ರೀ ಡಿ.ಎನ್. ಜೀವರಾಜ್:– ತಾವು ಬಹಳ ಒಳ್ಳೆಯ ಪ್ರಶ್ನೆ ಕೇಳಿದಿರಿ. ನಾನು ಏಕೆ ಇದನ್ನು ಹೇಳಲಿಲ್ಲವೆಂದರೆ, ದಿನಾಂಕ: 10–03–2014 ಕ್ಕೆ ಆದೇಶ ಮಾಡಿ ಬಿಟ್ಟಿದ್ದಾರೆ.

(ಗೊಂದಲ)

ಅಧ್ಯಕ್ಷರು:– ಆದೇಶ ಮಾಡಿದರೂ ಒಂದು ಹೊಸ ಕಾನೂನು ತಂದು ತೆಗೆದು ಬಿಸಾಕಿ.

ಶ್ರೀ ಕೆ.ಜಿ. ಬೋಪಯ್ಯ:– ಮಾನ್ಯ ಅಧ್ಯಕ್ಷರೆ, ಅಲ್ಲಿ ಅವರ affidavit ಇದೆ. ನಾವು ground survey ಮಾಡಿ ಕೊಡುತ್ತೇವೆಂದು ಇದೆ. ಅದಕ್ಕೆ ground survey ಗೆ ನಾವು ಕೇಳುತ್ತಿರುವುದು ಬೇರೆ ಏನೂ ಇಲ್ಲ.

ಶ್ರೀ ಡಿ.ಎನ್. ಜೀವರಾಜ್:– ಅದಕ್ಕೆ ground survey ಬೇಕೆಂದು specific ಆಗಿ ಕೇಳುತ್ತಿರುವುದು. ಅವರು ಬಹಳ ಮುಕ್ತ ಮನಸ್ಸು ಹೊಂದಿದ್ದಾರೆ.

ಅಧ್ಯಕ್ಷರು:– ಆಯಿತು ಬಿಡಿ.

ಶ್ರೀ ಕೆ.ಜಿ. ಬೋಪಯ್ಯ:– MOF ನ secretary ಯವರು Ground survey ಮಾಡಿ ಹೊಸ notification ಮಾಡುತ್ತೇವೆಂದು affidavit ಹಾಕಿ ಬಿಟ್ಟಿದ್ದಾರೆ. ಹೊಸ notification ಮಾಡಬೇಕಾದರೆ, ಇಲ್ಲಿಂದ ground survey report ಅವರ ಮುಂದೆ ಬೇಕು.

ಶ್ರೀ ಡಿ.ಎನ್. ಜೀವರಾಜ್:– Ground survey report ಕಳುಹಿಸುತ್ತಾ sand mining ಮತ್ತು ಇಟ್ಟಿಗೆ ಇದನ್ನೆಲ್ಲಾ ಸೇರಿಸಿಕೊಂಡು ಕಳುಹಿಸಿಬೇಕು. ಇಲ್ಲದಿದ್ದರೆ ಅದು ಮತ್ತೆ ಸಮಸ್ಯೆಯಾಗಿ ಬಿಡುತ್ತದೆ.

ಅಧ್ಯಕ್ಷರು:– ಆಯಿತು. ಕಾನೂನು ಸಚಿವರೆ, ತಾವು ಒಂದು ಕೆಲಸ ಮಾಡಿ. ನಾಳೆ ಒಂದು meeting ಕರೆದು ಅವರು detrails ಕೊಡುತ್ತಾರೆ. ಅದನ್ನು ಮುಗಿಸಿ.

ಶ್ರೀ ಟಿ.ಬಿ. ಜಯಚಂದ್ರ:– ನಾಳೆ ಉತ್ತರ ಕೊಡುತ್ತೇವೆ.

ಅಧ್ಯಕ್ಷರು:– ಆಯಿತು. 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ, ಇದರಡಿಯಲ್ಲಿ ಕ್ರಮ ಸಂಖ್ಯೆ (2) ರಲ್ಲಿರುವ ಸಕ್ರಮ ಗಣಿಗಾರಿಕೆಯ ವಿಚಾರ ನಾಳೆ ತೆಗೆದುಕೊಳ್ಳೋಣ. ಕ್ರಮ ಸಂಖ್ಯೆ (3) ರಲ್ಲಿರುವ ವಿಚಾರದ ಬಗ್ಗೆ ರವಿಸುಬ್ರಹ್ಮಣ್ಯ ರವರು ಇಂದು ಮಾತನಾಡಿದ್ದಾರೆ, ಈಗ ಅವರು ಇಲ್ಲ. ಕ್ರಮ ಸಂಖ್ಯೆ: (4) ರಲ್ಲಿರುವ ವಿಚಾರಕ್ಕೆ ನಾಳೆ ಉತ್ತರ ಕೊಡುತ್ತಾರೆ. ಈಗ ಗಮನ ಸೆಳೆಯುವ ಸೂಚನೆ ತೆಗೆದುಕೊಳ್ಳೋಣ. ಮೊದಲನೆಯದಾಗಿ, ಮಧು ಎಸ್. ಬಂಗಾರಪ್ಪನವರು ಇಲ್ಲ. ಎರಡನೇಯದಾಗಿ ಎಂ. ಕೃಷ್ಣಾರೆಡ್ಡಿಯವರು ಇಲ್ಲ. ಮಲ್ಲಿಕಾರ್ಜುನ ಸಿದ್ದರಾಮಪ್ಪ ಖೂಬಾ ರವರು ಕೇಳಿ.